ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/98/2015-16. ದಿನಾಂಕ:20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಚಲುವಾದಿ ರವೀಂದ್ರ ತಂದೆ ಚಲುವಾದಿ ಬಸಪ್ಪ ಕಡಲಾಬಾಳು ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು 2)ಚಲುವಾದಿ ಈರಪ್ಪ ತಂದೆ ಮುಪ್ಪಿನಪ್ಪ ಗೊಲ್ಲರಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | ಚಲುವಾದಿ ಗಿಡ್ಡಪ್ಪ ತಂದೆ ಲೇಟ್ ಮುಪ್ಪಿನಪ್ಪ ಗೊಲ್ಲರಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 54/1. ವಿಸ್ತೀರ್ಣ 4-44. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 54/1. ವಿಸ್ತೀರ್ಣ 4-44. ಎಕ್ರೆ ಜಮೀನನ್ನು ಸದರಿ ತಾಲೂಕು ಗೊಲ್ಲರಹಳ್ಳಿ ಗ್ರಾಮದ ಚಲುವಾದಿ ಈರಪ್ಪ ತಂದೆ ಮುಪ್ಪಿನಪ್ಪ ಇವರಿಂದ ಹಗರಿಬೊಮ್ಮನಹಳ್ಳಿ ತಾಲೂಕು ಕಡಲಾಬಾಳು ಗ್ರಾಮದ ಚಲುವಾದಿ ರವೀಂದ್ರ ತಂದೆ ಚಲುವಾದಿ ಬಸಪ್ಪ ಇವರು ದಿನಾಂಕ 11-09-2015 ರ ಡಾಕ್ಯುಮೆಂಟ್ ನಂಬರ್: 1864/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ದೂಪದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 14-09-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಗೊಲ್ಲರಹಳ್ಳಿ ಗ್ರಾಮದ ಚಲುವಾದಿ ಗಿಡ್ಡಪ್ಪ ತಂದೆ ಲೇಟ್ ಮುಪ್ಪಿನಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 24/2015-16. ದಿನಾಂಕ 13-10-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 16-03-2016 ರಿಂದ 20-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ದೂಪದಹಳ್ಳಿ ಗ್ರಾಮದ ಸನಂ 54/1. ವಿಸ್ತೀರ್ಣ 4-44. ಎಕ್ರೆ ಜಮೀನನ್ನು ಸದರಿ ತಾಲೂಕು ಗೊಲ್ಲರಹಳ್ಳಿ ಗ್ರಾಮದ ಚಲುವಾದಿ ಈರಪ್ಪ ತಂದೆ ಮುಪ್ಪಿನಪ್ಪ. ಇವರಿಂದ ದಿನಾಂಕ 11-09-2015 ರ ಡಾಕ್ಯುಮೆಂಟ್ ನಂಬರ್: 1864/2015-16.ರ ಪ್ರಕಾರ ರೂ: 2.25.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜಿಯಾಗಿ ಸದರಿ ಜಮೀನಿನ ಮೇಲೆ ಈರಪ್ಪ ಇವರು ಸಾಲ ಪಡೆದಿದ್ದು ಸದರಿ ಸಾಲವನ್ನು ದಿನಾಂಕ 22-04-2016. ರಂದು ಮರು ಪಾವತಿ ಮಾಡಿರುತ್ತಾರೆ. ನಾವುಗಳು ಸದರಿ ಜಮೀನಿನ ವಿಷಯದಲ್ಲಿ ರಾಜಿಯಾಗಿದ್ದು ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ಯಾವ ಆಕ್ಷೇಪಣೆಗಳು ಇಲ್ಲವೆಂದು ಒಪ್ಪಿಗೆ ಕರಾರು ಪತ್ರವನ್ನು ಹಾಜರು ಪಡಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ತಕರಾರು ಅರ್ಜಿಯನ್ನು ಹಿಂದೆ ಪಡೆದಿರುವುದರಿಂದ ನೊಂದಾಯಿತ ಕ್ರಯ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 54/1. ವಿಸ್ತೀರ್ಣ 4-44. ಎಕ್ರೆ ಜಮೀನನ್ನು ದಿನಾಂಕ 11-09-2015. ರ ಡಾಕ್ಯುಮೆಂಟ್ ನಂಬರ್: 1864/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಚಲುವಾದಿ ರವೀಂದ್ರ ತಂದೆ ಚಲುವಾದಿ ಬಸಪ್ಪ. ಕಡಲಾಬಾಳು ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಚಲುವಾದಿ ರವೀಂದ್ರ ತಂದೆ ಚಲುವಾದಿ ಬಸಪ್ಪ. ಕಡಲಾಬಾಳು ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು. ಚಲುವಾದಿ ಈರಪ್ಪ ತಂದೆ ಮುಪ್ಪಿನಪ್ಪ ಗೊಲ್ಲರಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಚಲುವಾದಿ ಗಿಡ್ಡಪ್ಪ ತಂದೆ ಲೇಟ್ ಮುಪ್ಪಿನಪ್ಪ ಗೊಲ್ಲರಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.